ಸಾಕ್ಷಿಯನ್ನು ದಿಃ 26.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ

ಮೃತ ಶೇಖರ್ ನನ್ನ ಮಗಳ ಮಗನಾಗಿದ್ದನು. ನನ್ನ ಮಗಳು ಮತ್ತು ಅಳಿಯ ಇಬ್ಬರು ಮೃತ ಪಟ್ಟಿರುತ್ತಾರೆ. 2 ನೇ ಅರ್ಜಿದಾರರು ಮೃತನ ಅಣ್ಣ. ನಾನು ಮೃತನಿಗೆ ಅಜ್ಜಿಯಾಗಬೇಕು. ಮೃತನು ಹೋಟೇಲ್ ವ್ಯವಹಾರ ಮಾಡುತ್ತಿದ್ದ ಎಂದು ಹೇಳಿದ್ದು ಆ ಬಗ್ಗೆ ಪರವಾನಗಿ ಮತ್ತು ಇನ್ನಿತರೆ ದಾಖಲೆಗಳು ಇವೆ. ನಿಪಿ. 13 ಅನ್ನು ಹೋಟೇಲ್ ನಡೆಸುವಾಗ ಮಾಡಿರುತ್ತಾರೆ. ಅಂದಾಜು 18 ವರ್ಷ ಆಗಿರಬಹುದು. ನಿಪಿ. 13 ಅನ್ನು ಯಾರು ತಂದು ಕೊಟ್ಟರು ಎಂದರೆ ಸಾಕ್ಷಿಯು ನನ್ನ ಬಳಿ ಇತ್ತು ಎಂದು ಉತ್ತರಿಸಿರುತ್ತಾರೆ. ನಿಪಿ. 13 ರ ಮೂಲ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ಹೋಟೇಲ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಲೆಕ್ಕಪತ್ರ ನನ್ನ ಬಳಿ ಇಲ್ಲ. ಪೋಲೀಸರು ನನ್ನನ್ನು ಮತ್ತು ಚಂದನ್ ನನ್ನು ವಿಚಾರಣೆ ಮಾಡಿರುತ್ತಾರೆ. ಪೋಲೀಸರ ಬಳಿ ಮೃತನು ಹೋಟೇಲ್ ವ್ಯವಹಾರ ಮಾಡುತ್ತಿದ್ದ ಎಂದು ಹೇಳಲು ತೊಂದರೆ ಇರಲಿಲ್ಲ. ಪೋಲೀಸರ ಬಳಿ ಮೃತನು ವ್ಯವಸಾಯ ಮಾಡುತ್ತಿದ್ದ ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿಯು ಆ ರೀತಿ ನಾನು ಹೇಳಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ಚಂದನ್ ಈಗ ಕೂಲಿ ಕೆಲಸ ಮಾಡುತ್ತಿದ್ದಾನೆ. ನಿಪಿ. 13 ಅನ್ನು ಈ ಪ್ರಕರಣಕ್ಕಾಗಿ ಸೃಷ್ಠಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಹೇಗೆ ಆಯಿತು ಎಂದು ಯಾರು ನೋಡಿರುವುದಿಲ್ಲ ಎಂದರೆ ಸರಿ. ಮೋಟಾರ್ ಸೈಕಲ್ ಅನ್ನು ಯಾರು ಚಲಾಯಿಸಿಕೂಂಡು ಹೋಗುತ್ತಿದ್ದರು ಎಂದು ಯಾರು ನೋಡಿರುವುದಿಲ್ಲ ಎಂದರೆ ಸಾಕ್ಷಿಯು ಪ್ರಸನ್ನ ಚಲಾಯಿಸಿಕೊಂಡು ಹೋಗುತ್ತಿದ್ದ ಎಂದು ಉತ್ತರಿಸಿರುತ್ತಾರೆ. ನಾನು ಮತ್ತು ಚಂದನ್ ಅಪಘಾತ ನೋಡಿರುವುದಿಲ್ಲ ಎಂದರೆ ಸರಿ. ಪೋಲೀಸರು ಪ್ರಸನ್ನ ಮತ್ತು ಮೃತ ಶೇಖರ್ ಇಬ್ಬರ ಮೇಲೂ ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಸದರಿ ಇಬ್ಬರಿಗೂ ಚಾಲನ ಪರವಾನಗಿ ಇಲ್ಲ ಎಂದು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ಶೇಖರನಿಗೆ ಬೈಕ್ ಚಾಲನೆ ಮಾಡಲು ಬರುತ್ತಿರಲಿಲ್ಲ ಎಂದು ಉತ್ತರಿಸಿರುತ್ತಾರೆ. ಅಪಘಾತ ಸಮಯದಲ್ಲಿ ಮೃತ

ಶೇಖರ್ ಬೈಕ್ ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಆ ದಿನ ರಾತ್ರಿ 01.00 ಗಂಟೆಗೆ ದಸರಾದ ಲೈಟ್ ಬೆಳಕು ನೋಡಲು ಪ್ರಸನ್ನ ಮತ್ತು ಶೇಖರ್ ಹೋಗಿದ್ದರು. ಸದರಿ ಇಬ್ಬರಿಗೂ ಚಾಲನ ಪರವಾನಗಿ ಇಲ್ಲದೇ ಇರುವ ಕಾರಣ 2 ನೇ ಎದುರುದಾರರು ಪರಿಹಾರ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮೊಮ್ಮಗನಿಗೆ ತಲೆಗೆ ಹೆಚ್ಚು ಏಟಾಗಿ ಮೃತಪಟ್ಟಿರುತ್ತಾನೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಮೃತ ಹೆಲ್ಮೆಟ್ ಧರಿಸುತ್ತಿದ್ದರೆ ತಲೆಗೆ ಏಟಾಗುತ್ತಿರಲಿಲ್ಲ ಎಂದರೆ ಸಾಕ್ಷಿಯು ಹೆಲ್ಮೆಟ್  ಮನೆಯಿಂದ ತೆಗೆದುಕೂಂಡುಹೋಗಿದ್ದ ಹಾಕಿದ್ದನೋ ಇಲ್ಲವೋ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಪರಿಹಾರಕ್ಕಾಗಿ ಪೋಲೀಸರು ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ಮೃತನು ದಿನಕ್ಕೆ ರೂ.1000/- ಸಂಪಾದನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.